ಸೋಮವಾರಪೇಟೆ ತಾಲ್ಲೂಕಿನ ಕೊಡ್ಲಿಪೇಟೆಯ ವಿ.ಎಸ್.ಎಸ್.ಎಸ್.ಎನ್‌ನಲ್ಲಿ ಮಾರಾಟದ ಕಳಪೆ ಗೊಬ್ಬರ.

2727: (3731)

ಶ್ರೀ ಎಂ.ಪಿ.ಅಪ್ಪಚ್ಚುರಂಜನ್ (ಸೋಮವಾರಪೇಟೆ): ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಸೋಮವಾರಪೇಟೆ ತಾಲ್ಲೂಕಿನ ಕೊಡ್ಲಿಪೇಟೆ ವಿ.ಎಸ್.ಎಸ್.ಎಸ್.ಎನ್.ನಲ್ಲಿ ಹಣ ದುರುಪಯೋಗ ಆಗಿರುವ ಹಣ ಎಷ್ಟು?

ಆ) ಹಾಗಿದ್ದಲ್ಲಿ ಅದನ್ನು ವಸೂಲು ಮಾಡಲು ಯಾವ ಕ್ರಮ ತೆಗೆದುಕೊಳ್ಳಲಾಗಿದೆ?

ಇ) ಗೌಡಳ್ಳಿ ವಿ.ಎಸ್.ಎಸ್.ಎಸ್.ಎನ್.ನಲ್ಲಿ ಮಾರಾಟದ ಕಳಪೆ ಗೊಬ್ಬರ ಎಷ್ಟು? ಕಳಪೆ ಗೊಬ್ಬರ ಪೂರೈಕೆ ಮಾಡಿದವರ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗಿದೆ? (ವಿವರ ನೀಡುವುದು)

ಶ್ರೀ ಎಸ್.ಎಸ್.ಪಾಟೀಲ್ (ಸಹಕಾರ ಸಚಿವರು):

ಅ) ಹಣ ದುರುಪಯೋಗ ಆಗಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಗೌಡಳ್ಳಿ ವಿ.ಎಸ್.ಎಸ್.ಎಸ್.ಎನ್.ನಲ್ಲಿ ಮಾರಾಟವಾದ ಕಳಪೆ ಗೊಬ್ಬರ 608 ಚೀಲಗಳು. ಇದರ ಮೊಬಲಗು ರೂ. 1,91,470 ಆಗಿರುತ್ತದೆ. ಕಳಪೆ ಗೊಬ್ಬರ ಪೂರೈಕೆ ಮಾಡಿದ ಮಲ್ನಾಡ್ ಏಜನ್ಸೀಸ್ ಮತ್ತು ವೀರಭದ್ರೇಶ್ವರ ಕಂಪನಿ ಇವರ ವಿರುದ್ಧ ಜಿಲ್ಲಾ ನ್ಯಾಯಾಲಯದಲ್ಲಿ ಸಂಖ್ಯೆ: 1: 97-98ರ ಪ್ರಕಾರ ಕ್ರಿಮಿನಲ್ ಮೊಕದ್ದಮೆ ದಾಖಲಾಗಿರುತ್ತದೆ. ಹಾಗೂ ಮಲ್ನಾಡ್ ಏಜೆನ್ಸಿ ಮತ್ತು ವೀರಭದ್ರೇಶ್ವರ ಕಂಪನಿ ವಿರುದ್ಧ ಸೋಮವಾರಪೇಟೆ ತಾಲ್ಲೂಕು ಸಿವಿಲ್ ಕೋರ್ಟ್‌ನಲ್ಲಿ ಮೊಕದ್ದಮೆ ಸಂಖ್ಯೆ: 114: 98 ಮತ್ತು 115: 98ರ ಪ್ರಕಾರ ಕ್ರಮವಾಗಿ ಕೇಸ್ ದಾಖಲು ಮಾಡಲಾಗಿದೆ.

ಸೋಮವಾರಪೇಟೆ ತಾಲ್ಲೂಕಿನ ಅಕ್ರಮ ಸಾಗುವಳಿಯನ್ನು ಸಕ್ರಮಗೊಳಿಸುವುದು.

2728 (3807)